೫) ಐದು ವಿದ್ಯುಚ್ಛಕ್ತಿ ರಹಿತಹಳ್ಳಿಗಳಲ್ಲಿದ್ದು ೧೯೮೬-೮೭ನೇ ಸಾಲಿನಲ್ಲಿ ಆಪ್ಗಳನ್ನು ವಿದ್ಯುದ್ದೀಕರಣ ಮಾಡಲು ಯೋಜಿಸಲಾಗಿದೆ, ಮುಂದಿನ ವರ್ಷ ವಿದ್ಯುಚ್ಛಕ್ತಿ ರಹಿತ ೩ ತಾಂಡಾಗಳಿಗೆ ವಿದ್ಯುದ್ದೀಕರಣಗೊಳಿಸಲು ಯೋಜಿಸಲಾಗಿದೆ.

ಶ್ರೀ ಯು. ಭೂಪತಿ.—ವಿದ್ಯುದ್ದೀಕರಣ ಕಾರ್ಯ ಬಹಳ ಮಂದಗತಿಯಿಂದ ನಡೆಯುತ್ತಿದೆಯೇ ಎಂದು ಕೇಳಿರುವುದಕ್ಕೆ ಮಾನ್ಯ ಮಂತ್ರಿಗಳು ಮಂದಗತಿಯಿಂದ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಅಲ್ಲಿರತಕ್ಕ ಇಲಾಖೆಯ ಅಧಿಕಾರಿಗಳು ಹೇಳುವ ಪ್ರಕಾರ ಹೇಳುವುದಾದರೆ, ಅವರು ವಿದ್ಯುದ್ದೀಕರಣ ಗೊಳಿಸಲು ಅವಕ್ಕೆ ಬೇಕಾದ ವೈರ್, ಕಂಬಗಳು ಸಪ್ಲೈ ಆಗುತ್ತಿಲ್ಲ. ಅಲ್ಲದೇ ಕೆಲಸಗಾರರ ಸಂಖ್ಯೆ ಸಹ ಕಡಿಮೆ ಇದೆ. ಹೈಯರ್ ಟೈಮ್‌ಗೆ ಸರಿಯಾಗಿ ಸಪ್ಲೈ ಆಗುತ್ತಿಲ್ಲ. ಮೇಲಧಿಕಾರಿಗಳಿಗೆ ಹೇಳಿ ಮಾಡಿಸಿ ಅಂದರೆ ಅದು ಚೀಫ್ ಇಂಜಿನಿಯರ್‌ವರೆಗೆ ಹೋಗುತ್ತವೆ ಎಂದು ಹೇಳುತ್ತಾರೆ. ಇದರ ಬಗ್ಗೆ ಯಾರಿಗೆ ಹೇಳಬೇಕು ಎಂದು ಗೊತ್ತಾಗುವುದಿಲ್ಲ. ಇದೇ ಸದನದಲ್ಲಿ ಹಿಂದೆ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಒಂಗೂರು ಕ್ಷೇತ್ರದ ಎಲ್ಲ ಹಳ್ಳಿಗಳಿಗೂ ವಿದ್ಯುತ್ ಒದಗಿಸುತ್ತೇವೆಂದು ಉತ್ತರ ಕೊಟ್ಟಿದ್ದರು. ಒಂದು ವರ್ಷ ಆಯಿತು ಇನ್ನು ಬಹಳ ಹಳ್ಳಿಗಳ ಜೊತೆಗೆ ತಾಂಡಾಗಳಿಗೂ ವಿದ್ಯುದ್ದೀಕರಣ ಗೊಳಿಸಬೇಕಾಗಿದೆ. ತಾಂಡಾಗಳು ದೊಡ್ಡದು ಇವೆ. ಆದ್ದರಿಂದ, ದಯವಿಟ್ಟು ಈ ತಾಂಡಾಗಳಿಗೂ ವಿದ್ಯುದ್ದೀಕರಣಗೊಳಿಸಬೇಕು. ಮೂರು ತಾಂಡಗಳು ಮಾತ್ರ ಅಲ್ಲ, ಇನ್ನೂ ಜಾಸ್ತಿ ಇವೆ. ಅವುಗಳೆಲ್ಲಾ ವಿದ್ಯುದ್ದೀಕರಣಗೊಳಿಸಬೇಕು. ಸ್ವಾತಂತ್ರ್ಯ ಬಂದು ೩೯ ವರ್ಷವಾಯಿತು, ನಮಗೆ ಇನ್ನೂ ಕರೆಂಟ್ ಬಂದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ, ಇವುಗಳೆಲ್ಲಾ ವಿದ್ಯುದ್ದೀಕರಣಗೊಳಿಸಲು ಸರ್ಕಾರದಿಂದ ಆಜ್ಞೆಯನ್ನು ಹೊರಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮುಂದಗತಿಯಿಂದ ನಡೆಯುತ್ತಿಲ್ಲ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ, ಮೊದಲು ಸರಾಸರಿ ಒಂದು ವರ್ಷಕ್ಕೆ ೫೦-೬೦ ಗ್ರಾಮಗಳಿಗೆ ವಿದ್ಯುದ್ದೀಕರಣ ಗೊಳಿಸಲಾಗುತ್ತಿತ್ತು. ಇತ್ತೀಚೆಗೆ ಪ್ರತಿ ವರ್ಷ ಸರಾಸರಿ ೨೦೦ ಗ್ರಾಮಗಳಿಗೆ ವಿದ್ಯುದ್ದೀಕರಣ ಗೊಳಿಸಲಾಗುತ್ತಿದೆ. ಮಾನ್ಯ ಸದಸ್ಯರ ಪ್ರಶ್ನೆ ಏನು ಅಂದರೆ, ರವಿನ್ಯೂ ವಿಲೇಜ್ ಸೆನ್ಸಸ್‌ನಲ್ಲಿರತಕ್ಕ ಗ್ರಾಮಗಳಿಗೆ ಮಾತ್ರ ನಾವು ಗಣನೆಗೆ ತೆಗೆದುಕೊಂಡಿದ್ದೇವೆಂದು ಇದೆ. ಮೊದಲೂ ರವಿನ್ಯೂ ವಿಲೇಜ್ ಇದ್ದರೆ ಅವಕ್ಕೆ ವಿದ್ಯುದ್ದೀಕರಣ ಮಾಡಿ ತಾಂಡಾಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾ ಇರಲಿಲ್ಲ ಈಗ ತೆಗೆದುಕೊಂಡಿದ್ದೇವೆ. ಒಂದು ರವಿನ್ಯೂ ವಿಲೇಜ್ ವಿದ್ಯುದ್ದೀಕರಣ ಪ್ರೋಗ್ರಾಮ್ ಹಾಕಿದರೆ ಮೊದಲು ಆ ಭಾಗದಲ್ಲಿರತಕ್ಕ ತಾಂಡಾಗಳನ್ನು ಸೇರಿಸಿ ಮಾಡುತ್ತಿದ್ದೇವೆ. ಸಂಡೂರು ತಾಲ್ಲೂಕು ಬಗ್ಗೆ ಹೇಳುವುದಾದರೆ, ಅಲ್ಲಿ ತಾಂಡಾಗಳ ಸಂಖ್ಯೆ ಜಾಸ್ತಿ ಇದೆ ಒಂದೊಂದು ಸಾರಿ ತಾಂಡಾಗಳು ಈ ಗ್ರಾಮಗಳಿಗಿಂತಲೂ ದೊಡ್ಡದು ಇರುತ್ತವೆ. ಅವು ಲೆಕ್ಕದಲ್ಲಿ ಇಲ್ಲದೇ ಇದ್ದರು ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿದ್ದೇವೆ ಮಾನ್ಯ ಸದಸ್ಯರು ಕ್ಷೇತ್ರದಲ್ಲಿ ವಿದ್ಯುದ್ದೀಕರಣ ಕೆಲಸ ಮಾಡಿಸಿಕೊಡಬೇಕೆಂದು ಹೇಳಿದ್ದಾರೆ, ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ತಮ್ಮ ಮುಂತಾಂತರ ಮಂತ್ರಿಗಳಿಗೆ ಕೇಳ ಬಯಸುತ್ತೇನೆ. ಕಳೆದ ಮೂರು ವರ್ಷಗಳಿಂದ ಕೆಲಸ ತೀವ್ರಗತಿಯಿಂದ ನಡೆಯುತ್ತಿದೆ. ಇನ್ನು ಆರು ತಿಂಗಳೊಳಗೆ ಕೆಲಸ ಮುಗಿಸಿಕೊಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಆದಷ್ಟು ಬೇಗ ಆದನ್ನು ಮುಗಿಸುತ್ತೇನೆ.

ಅರಣ್ಯಾಧಿಕಾರಿಯವರಿಂ ಮನೆ ಕಟ್ಟಲು ಕೊಟ್ಟಿರುವ ಪುರಾವೆ ಬಗ್ಗೆ

೨೧೫. ಶ್ರೀ ಆರ್. ಎನ್. ನಾಯಕ್.—ಮಾನ್ಯ ಅರಣ್ಯ ಸಚಿವರು ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೫-೮೬ನೇ ವರ್ಷದಲ್ಲಿ ಹಿರಿಯೂರಿಗೆ ಮೊದಲು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಅರಣ್ಯ ಭಾಗದಲ್ಲಿ ಜಿಲ್ಲಾ ಅರಣ್ಯಾಧಿಕಾರಿಯವರು ಎಷ್ಟು ಜನರಿಗೆ ರಿಯಾಯಿತಿ ದರದಲ್ಲಿ ಮನೆ ಕಟ್ಟುವ ಬಗ್ಗೆ ಕಟ್ಟಿಗೆ ಕೊಟ್ಟಿದ್ದಾರೆ ?

(ಆ) ಯಾರ್ಯಾರಿಗೆ ಕೊಟ್ಟಿದ್ದಾರೆ ? (ಯಾದಿಯನ್ನು ಪೂರೈಸುವುದು)

(ಇ) ರಿಯಾಯಿತಿ ದರದಲ್ಲಿ ಎಷ್ಟು ಬೆಲೆ ಬಾಳುವ ಕಟ್ಟಿಗೆ ಕೊಡಲಾಗಿದೆ ? ಮೂರು ಕಟ್ಟೆಯಲ್ಲಿ ಅದರ ಬೆಲೆ ಎಷ್ಟಾಗಬಹುದು ?

(ಈ) ರಿಯಾಯಿತಿ ದರದಲ್ಲಿ ಕಟ್ಟಿಗೆ ಪಡೆಯುವವರನ್ನು ಆರಿಸುವಾಗ ಕಾನೂನು ರೀತ್ಯಾ ಪಾಲಿಸಬೇಕಾದ ಕ್ರಮಗಳೇನು ?

(ಉ) ಅಧಿಕಾರಿಗಳು ನಿಯಮಗಳನ್ನು ಪಾಲಿಸಿದ್ದಾರೆಯೆ ? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

(ಊ) ಕಾನೂನು ರೀತಿಯಲ್ಲಿ ವರ್ತಿಸದಿದ್ದಲ್ಲಿ ಅವರ ಮೇಲೆ ಏನು ಕ್ರಮ ಕೈಗೊಳ್ಳಲು ಯೋಚಿಸಿದ್ದೀರಿ ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ ಗಣಿ, ಮತ್ತು ಭೂ ವಿಜ್ಞಾನ ಮಂತ್ರಿಗಳು).—

(ಅ) ೩೧-೩-೧೯ ಕ್ಕೆ ಮೊದಲು ೧೯೮೫-೮೬ರ ಸಾಲಿನಲ್ಲಿ ೯೧ ಜನರಿಗೆ ಹೊನ್ನಾವರ ಅರಣ್ಯ ವಿಭಾಗದಲ್ಲಿ ಮನೆ ಕಟ್ಟಲು ನಿಗಧಿತ ದರದ ಮೇರೆಗೆ ಮರವನ್ನು ಮಂಜೂರು ಮಾಡಿದೆ. ರಿಯಾಯಿತಿ ದರದಲ್ಲಿ ಯಾರಿಗೂ ಮರವನ್ನು ಮಂಜೂರು ಮಾಡಿರುವುದಿಲ್ಲ.

(ಆ) ಮರವನ್ನು ಮಂಜೂರು ಮಾಡಿದ ಜನರ ಪಟ್ಟಿಯನ್ನು ಲಗತ್ತಿಸಿದೆ.

೧೯೮೫-೮೬ನೇ ಸಾಲಿನಲ್ಲಿ ಮನೆ ಕಟ್ಟುವವರಿಗೆ ಕಟ್ಟಿಗೆ ಕೊಟ್ಟ ಯಾದಿ.

ಕ್ರಮ ಸಂಖ್ಯೆ	ಯಾರ್ಯಾರಿಗೆ ಕೊಟ್ಟಿದ್ದಾರೆ
೧	೨
೧	ಶ್ರೀ ಗೋವಿಂದ ಪುರುಷೋತ್ತಮ ನಾಯಕ್, ಸಾ. ಚಿತ್ರಗಿ, ತಾಲ್ಲೂಕು ಕುಮಟಾ
೨	ಶ್ರೀಮತಿ ಸ್ಮಿತಾ ಸತ್ಯಾನಂದ ಕಾಮತ, ಸಾ. ಚಿತ್ರಗಿ, ತಾಲ್ಲೂಕು ಕುಮಟಾ
೩	ಶ್ರೀ ಆರ್. ಎಚ್. ಕಾಮತ, ಸಾ. ಕುಮಟಾ
೪	ಶ್ರೀ ಫ್ರಾನ್ಸಿಸ್ ಲುಯಿಸ ಡಿಸೋಜಾ, ಸಾ. ಹೊನ್ನಾವರ
೫	ಶ್ರೀ ನಾಗಪ್ಪಾ ತಿಪ್ಪಯ್ಯ ನಾಯ್ಕ, ಸಾ ಅನೀಲಗೋಡ
೬	ಶ್ರೀ ಗಣಪಯ್ಯ ಮಣಿಯಪ್ಪಾ, ನಾಯ್ಕ, ಸಾ, ಅನೀಲಗೋಡ
೭	ಶ್ರೀ ಈಶ್ವರ ನಾಗಪ್ಪಾ ನಾಯ್ಕ, ಸಾ. ಹಡದೀಪುರ
೮	ಶ್ರೀ ಮಹಮ್ಮದ್ ರುಫಿ ಮೂಹಿದ್ದಿನ್ ಅಬುಹುಸೆನ್, ಸಾ. ಮಂಕಿ
೯	ಶ್ರೀ ಅಬ್ದುಲ್ ರಹೀಮಾನ್ ಮೂಹಿದಿನ ತಾಹೀರ ಬಾಪು, ಸಾ. ಮಂಕಿ
೧೦	ಶ್ರೀ ಹುಲಿಯಪ್ಪಾ ಫಕೀರ ಗೌಡಾ, ಸಾ. ವಡಗೇರಿ
೧೧	ದಿ ಹೆಡ್ ಮ್ಯಾಸ್ಟರ್, ಬಬ್ರುಲಿಂಗೇಶ್ವರ ವಿದ್ಯಾಲಯ, ಉಸ್ಕೇರಿ, ಕುಮಟಾ
೧೨	ಶ್ರೀ ಬಾಳಕೃಷ್ಣ ನಾಗಪ್ಪಾ ಪೈ, ಸಾ ಬಲಾಳೆ
೧೩	ಶ್ರೀ ಪಾರುತಿ ನಾರಾಯಣ ನಾಯ್ಕ, ಸಾ. ಹಳದೀಪುರ
೧೪	ಶ್ರೀ ಗಣಪತಿ ಹರಿ ಪಾಷಿಕ್ಕರ, ಸಾ. ಹೊನ್ನಾವರ
೧೫	ಶ್ರೀ ಶಿವಪ್ಪಾ ಹೊಸಬಯ್ಯಾ ನಾಯ್ಕ, ಸಾ ಹಳೇ ಹೆರಂಟಾ
೧೬	ಶ್ರೀಮತಿ ಮಾಲಿನಿ ಕೋಂ ಎಮ್. ನಾಯ್ಕ, ಸಾ, ಮಣಕಿ, ಕುಮಟಾ
೧೭	ಶ್ರೀ ಹನುಮಂತ ಜಟ್ಟಪ್ಪ ನಾಯ್ಕ, ಸಾ. ಮಂಕಿ
೧೮	ಶ್ರೀಮತಿ ಮಣಿಪ್ರಭಾ ನಾರಾಯಣ ನಾಯಕ ಸಾ. ಹಿರೇಗುತ್ತಿ
೧೯	ಶ್ರೀಮತಿ ಶಾಂತಾಬಾಯಿ ವಿನಾಯಕ ಶಾನಭಾಗ, ಸಾ. ಅನಂತವಾಡಿ
೨೦	ಶ್ರೀ ಜೆ. ಪಿ. ಪೈ, ಸಾ. ಕುಮಟಾ
೨೧	ಶ್ರೀ ಶಾಂತಯ್ಯಾ ಮಹಾಬಳೇಶ್ವರ ನಾಯ್ಕ, ಸಾ. ಮಂಕಿ

೧	೨
೨೨	ಶ್ರೀ ಗೋಪಾಲ ಗೋವಿಂದ ಶಾನಭಾಗ, ಸಾ. ಚಿಕ್ಕನಕೋಡ
೨೩	ಶ್ರೀ ಪರಮೇಶ್ವರ ವಿ. ನಾಯ್ಕ, ಸಾ. ಪನ್ನಳ್ಳಿ
೨೪	ಶ್ರೀ ಗಜಾನನ ತಿಮ್ಮಣ್ಣಾ ನಾಯ್ಕ, ಸಾ. ರೊಯಲಕೇರಿ
೨೫	ಶ್ರೀ ಗೋವಿಂದ ಗಣೇಶ ಹೆಗಡೆ, ಸಾ. ಹೊಸ ಹೆರವಟ್ಟಾ
೨೬	ಶ್ರೀ ವೆಂಕಟೇಶ ರಾಮಾ ನಾಯ್ಕ, ಸಾ. ಹೊನ್ನಾವರ
೨೭	ಶ್ರೀ ವೆಂಕಟ್ರಮಣ ಎಮ್. ಮೊಗೇರ, ಸಾ. ಶಿರಾಲಿ
೨೮	ಶ್ರೀ ಸಂತ್ಯಾಕ ಫಾಸ್ಕಲ ಗೋಮ್ಸ್, ಸಾ. ಮಂಡಳ್ಳಿ
೨೯	ಶ್ರೀ ಹೊನ್ನಪ್ಪ ಮಹಾರಾಯ ನಾಯ್ಕ, ಸಾ. ಅಚವೆ
೩೦	ಶ್ರೀ ಕುಪ್ಪಯ್ಯಾ ಎನ್. ಭಟ್ ಸಾ. ಹೊದಕೆ ಶಿರೂರ
೩೧	ಶ್ರೀ ಸೀತಾರಾಮ ಪರಮೇಶ್ವರ ಭಟ್, ಸಾ. ಹೊಸಕುಳಿ
೩೨	ಶ್ರೀಮತಿ ಮಂಹಾದೇವಿ ರಾಮಚಂದ್ರ ನಾಯ್ಕ, ಸಾ. ಬೈಲೂರ
೩೩	ಶ್ರೀ ಆರ್. ಪಿ. ಪ್ರಭು, ಸಾ. ಹೊನ್ನಾವರ
೩೪	ಶ್ರೀ ಮಹಾಬಳೇಶ್ವರ ವಿಷ್ಣು ಹೆಗಡೆ, ಸಾ. ಗುಣವಂತೆ
೩೫	ದಿ ಪ್ರೆಸಿಡೆಂಟ್, ಟೌನ್ ಮುನಿಸಿಪಾಲ ಕೌನ್ಸಿಲ್, ಸಾ. ಹೊನ್ನಾವರ
೩೬	ಶ್ರೀ ರಾಯಾ ಮಂಜಯ್ಯಾ ನಾಯ್ಕ, ಸಾ. ಕುಮಟಾ
೩೭	ಶ್ರೀಮತಿ ಸಾವಿತ್ರಿ ಕೋಂ ಕಣೇಶ ಹೆಗಡೆ, ಸಾ. ಗುಣವಂತೆ
೩೮	ಶ್ರೀ ಗಣಪತಿ ರಘು ಶಾನಭಾಗ, ಸಾ. ಹೆರವಟ್ಟಾ
೩೯	ಶ್ರೀ ನಾರಾಯಣ ಗೋವಿಂದ ಶೆಟ್ಟಿ, ಸಾ. ಅಲಕೋಡ
೪೦	ಶ್ರೀ ಮೋಹನ ಮಂಜನಾಥ ಶಾನಭಾಗ, ಸಾ. ಹೊನ್ನಾವರ
೪೧	ಶ್ರೀ ಮಹಾಬಳೇಶ್ವರ ಗಣಪಯ್ಯಾ ಪಟಗಾರ, ಸಾ. ಅಚವೆ
೪೨	ಶ್ರೀ ಗಣಪತಿ ಯಾನೆ ಗೋವಿಂದ ಹೆಗಡೆ, ಸಾ. ಮುಗವಾ
೪೩	ಶ್ರೀ ಶ್ರೀನಿವಾಸ ಗಣೇಶ ಕಾಮತ, ಸಾ. ದುರ್ಗಾಕೇರಿ, ಹೊನ್ನಾವರ
೪೪	ಶ್ರೀ ಗಣೇಶ ಕೃಷ್ಣಾ ಕಾಮತ, ಸಾ. ದುರ್ಗಾಕೇರಿ
೪೫	ಶ್ರೀ ರಾಮಚಂದ್ರ ದೇವರು ಭಟ್, ಸಾ. ಹೊನ್ನಾವರ
೪೬	ಶ್ರೀಮತಿ ತುಳಸಿ ಕೋಂ ಮುಡಲಗಿ ಮೇಸ್ತಾ, ಸಾ. ಹೊನ್ನಾವರ
೪೭	ಶ್ರೀ ಶಿವಾ ಹುಲಿಯಾ ಗೌಡಾ, ಸಾ. ಶೀರಗುಂಜಿ
೪೮	ಶ್ರೀ ಮೋಹನ ಎಮರ್. ನಾಯಕ, ಸಾ. ಶೀರಗುಂಜಿ
೪೯	ಶ್ರೀ ಹನುಮಂತ ನಾರಾಯಣ ಭಂಡಾರಿ, ಸಾ. ಕರ್ಕಿಕೋಡಿ
೫೦	ದಿ ಪ್ರೆಸಿಡೆಂಟ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಕಮಿಟಿ, ಶ್ರೀರಾಮ ಮಂದಿರ, ಹೊನ್ನಾವರ
೫೧	ದಿ ಸೆಕ್ರೆಟರಿ, ನೀಮ್ ಎಜುಕೇಶನ್ ಸೊಸೈಟಿ, ಹೊನ್ನಾವರ
೫೨	ಶ್ರೀ ಮೋಹನ್ ಎನ್. ಪ್ರಭು, ಸಾ. ಹೊನ್ನಾವರ
೫೩	ಶ್ರೀ ರಾಮಕೃಷ್ಣ ನಾರಾಯಣ ಭಟ್, ಸಾ. ಹೊಸಮನೆ, ಗೋಕರ್ಣ
೫೪	ಶ್ರೀ ಶ್ರೀಪಾದ ವಿ. ಶಾನಭಾಗ, ಸಾ. ಮಾವಿನಕುರ್ವೆ
೫೫	ಶ್ರೀ ಭಾಸ್ಕರ ಅಣ್ಣಪ್ಪಾ ಮೋಗೇರ, ಸಾ. ಹಾವಳಿಮನೆ
೫೬	ಶ್ರೀ ದತ್ತಾತ್ರೇಯ ವಿ. ಹೆಗಡೆ, ಸಾ. ಕೂಡ್ಲ
೫೭	ಶ್ರೀ ಶ್ರೀಧರ ಸುಬ್ರಾಯ ಶೇಟ್, ಸಾ. ಮೇಲಿನ ಮಣ್ಣೆಗೆ
೫೮	ಶ್ರೀ ಅಬ್ದುಲ್ ರಜಾಕ್ ಅಲಿ ಶೇಖ್, ಸಾ. ಹಳೇ ಹೆರವಟ್ಟಾ
೫೯	ಶ್ರೀಮತಿ ಶಮಶದ್ ಅಬ್ದುಲ್ ರಹಮಾನ್ ಖಾಜಿ, ಸಾ. ಹಳೇ ಹೆರವಟ್ಟಾ
೬೦	ಶ್ರೀ ರೇವ ಫಾದರ್ ಸಿ. ಅಲಮೇಡಾ ಸಾ. ಹೊನ್ನಾವರ
೬೧	ಶ್ರೀ ಎನ್. ವಿ. ಪೈ, ಸಾ. ಹೆರವಟ್ಟಾ
೬೨	ಶ್ರೀ ಜಿ. ಎಸ್. ಶಾನಭಾಗ, ಸಾ. ಹೆರವಟ್ಟಾ

೧	೨
೬೩	ಶ್ರೀ ನಾಗಪ್ಪಾ ತುಳಸಂ ಗೌಡಾ, ಸಾ. ಕುಮಟಾ
೬೪	ಶ್ರೀ ನಾಗು ಭೈರಾ ಗೌಡಾ, ಸಾ. ಕುಮಟಾ
೬೫	ಶ್ರೀ ರಾಮಕೃಷ್ಣ ಮತ್ತು ಪ್ರಭು, ಸಾ. ಕುಮಟಾ
೬೬	ಶ್ರೀ ಮಂಮ್ಮಿ ಅಹ್ಮದ್ ಕುಟ್ಟಿ, ಸಾ. ಕುಂಬಾ
೬೭	ಶ್ರೀ ಎಸ್. ಎಚ್. ಪ್ರಭು, ಸಾ. ನೆಲ್ಲಿಕೇರಿ, ಕುಮಟಾ
೬೮	ಶ್ರೀ ಪರಮೇಶ್ವರ ಶಿವರಾಮ ಹೆಗಡೆ, ಸಾ. ಉಪ್ಪೋಣಿ
೬೯	ಶ್ರೀ ಜಟ್ಟಪ್ಪಾ ನಾಗಪ್ಪಾ ನಾಯ್ಕ, ಸಾ. ಕೋನಳ್ಳಿ
೭೦	ಶ್ರೀ ನಾಗೇಶ ನೀಲಕಂಠ ಪ್ರಭು, ಸಾ. ಹುಡಗೋಡ
೭೧	ಶ್ರೀ ಬೀರಾ ಕುಸಂ ಗೌಡಾ, ಸಾ. ಕುಮಟಾ
೭೨	ಶ್ರೀ ಮಾರುತಿ ಗೋವಿಂದ ಪ್ರಭು, ಸಾ. ಸಾಲಿಕೇರಿ
೭೩	ಶ್ರೀ ವಸ್ಯಾಂವ ಮಾರ್ಶಲ ಡಿಸೋಜಾ, ಸಾ. ಕಸಬಾ, ಬಾಂದಿಹಳ್ಳ
೭೪	ದಿ ಹೆಡ್ ಮಾಸ್ಟರ್, ಲೋಕನಾಥ ಹೈಸ್ಕೂಲ್, ಸಾ. ಗುಡ್‌ಕಾಗಲ್
೭೫	ಶ್ರೀಮತಿ ಗಂಗೂಬಾಯಿ ಭೈರಾಮ ಪಾಲೇಕರ್, ಸಾ. ಕಾಸರಕೋಡ್
೭೬	ಶ್ರೀ ಅಹಮದ್ ಅಕ್ರಮ್ ಅಬ್ದುಲ್ ಕರೀಮ್ ಶೇಖ್, ಸಾ. ಕುಮಟಾ
೭೭	ಶ್ರೀ ಭೈರಾ ತಿಮ್ಮಣ್ಣಾ ಗೌಡಾ, ಸಾ. ಹರೋಡಿ
೭೮	ಶ್ರೀ ಮಂಧು ಜಟ್ಟಿ ಮುಕ್ರಿ, ಸಾ. ವಾಲಗಳ್ಳಿ
೭೯	ಶ್ರೀ ಗಂಗಾ ಮಾರು ಗೌಡಾ, ಸಾ. ಮುರಳ್ಳಿ, ಕುಮಟಾ
೮೦	ಶ್ರೀ ಗಜಾನನ ಪರಮೇಶ್ವರ ಶಾನಭಾಗ, ಸಾ. ವಾಲಗಳ್ಳಿ
೮೧	ಶ್ರೀ ಹುಲಿಗಪ್ಪಾ ಮುರಕಂಡಿ ನಾಯ್ಕ, ಸಾ. ನಾಡುಮಾಸ್ಕೇರಿ, ಕುಮಟ
೮೨	ದಿ ಪ್ರೆಸಿಡೆಂಟ್, ವಿವೇಕ ನಗರ. ವಿಕಾಸ ಸಂಘ ವಿವೇಕನಗರ, ಕುಮಟ
೮೩	ಶ್ರೀ ನಾಗೇಂದ್ರ ನಾರಾಯಣ ಭಟ್, ಸಾ. ಉಪ್ಪಿನಪಟ್ಟಣ
೮೪	ಶ್ರೀ ಈಶ್ವರ ಶಿವಾ ಹೆಗಡೆ, ಸಾ. ಹಟ್ಟಿಕೇರಿ
೮೫	ಆರ್. ಪಿ. ಹೆಗಡೆ. ಸಾ. ಮುರೂರ
೮೬	ದಿ ಹೆಡ್ ಮಾಸ್ಟರ್, ಹೈಯರ್ ಪ್ರೈಮರಿ ಸ್ಕೂಲ್, ಗುಡೇಅಂಗಡಿ
೮೭	ದಿ ಹೆಡ್ ಮಾಸ್ಟರ್, ಹೈಯರ್ ಪ್ರೈಮರಿ ಸ್ಕೂಲ್, ಹೊಲನಗದ್ದಾ
೮೮	ಶ್ರೀ ಗಜಾನನ ಗೋಪಾಲ ಹೆಗಡೆ, ಸಾ. ಅಂತೊಳ್ಳಿ
೮೯	ಶ್ರೀ ಡಿ. ಅಶೋಕ ಎಮ್. ನಾಯ್ಕ, ಸಾ. ಮಂಕಿ
೯೦	ಶ್ರೀ ಕುಪ್ಪಾ ಈರಾ ನಾಯ್ಕ, ಸಾ. ಚಿತ್ರಾಪುರ
೯೧	ಶ್ರೀಮತಿ ಸುಭದ್ರಾ ಕೋಂ ಸುಬ್ರಾಯಂ ಭಟ್, ಸಾ. ಕಡತೋಕಾ

(ಇ) ಮನೆ ನಿರ್ಮಾಣಕ್ಕೆ ನಿಗಧಿತ ಬೆಲೆಯು ಮೇರೆಗೆ ರೂ. ೯,೪೯,೧೧೬–೦೦ ಬೆಲೆಯು ಮರವನ್ನು ಮಂಜೂರು ಮಾಡಿದೆ. ಈ ಬೆಲೆ ಮಾರುಕಟ್ಟೆಯ ಬೆಲೆಗಿಂತ ಹೆಚ್ಚಾಗಿರುತ್ತದೆ

(ಈ) ಮನೆಕಟ್ಟಲು, ಮರ ಪಡೆಯಲು, ಆಶಿಸುವವರು ಅರ್ಜಿಯೊಂದಿಗೆ ಮನೆಯಂ ನಕ್ಷೆ, ಯನ್ನು ಅಂದಾಜು ಪಟ್ಟಿ, ಮರದ ಅವಶ್ಯಕತೆ ದೃಢೀಕರಿಸುವ ಅಭಿಯಂತರರ ಪ್ರಮಾಣ ಪತ್ರವನ್ನು ಲಗತ್ತಿಸಬೇಕು. ಇವುಗಳನ್ನು ಪರಿಶೀಲಿಸಿದರಿಯಾಗಿದ್ದಲ್ಲಿ ಮರವನ್ನು ನಿಗಧಿತ ಬೆಲೆಗೆ ಮಂಜೂರು ಮಾಡಲಾಗುತ್ತದೆ.

(ಉ) ನಿಯಮಗಳನ್ನು ಪಾಲಿಸಿದ್ದಾರೆ. ಆದರೆ ನಿಗದಿತ ಬೆಲೆಯನ್ನು ಅನುಸರಿಸುವಾಗ ಕೆಲವು ಪ್ರಕರಣಗಳಲ್ಲಿ ತಪ್ಪಾಗಿವೆ.

(ಊ) ಇಲಾಖೆ ವಿಚಾರಣೆಯನ್ನು ನಡೆಸಲಾಗುತ್ತಿದೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಈ ಉತ್ತರದಲ್ಲಿ ಕೆಲವು ಸತ್ಯಕ್ಕೆ ದೂರವಾದಂತಹ ಅಂಶಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ, ನಿಗದಿತ ಬೆಲೆ ಮಾರುಕಟ್ಟೆ ಬೆಲೆಗಿಂತ ಹೆಚ್ಚಾಗಿದೆ. ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನಲ್ಲಿ ಮಾರುಕಟ್ಟೆ ಬೆಲೆಗಿಂತ ಹೆಚ್ಚಿಗೆ ದರದಲ್ಲಿ ಅರಣ್ಯ ಇಲಾಖೆಯವರು ಕಟ್ಟಿಗೆಯನ್ನು ಪೂರೈಸುವುದಾದರೆ ಇಲ್ಲಿ ಏತಕ್ಕೆ ಬರುತ್ತಾರೆ ? ಇದು ಸರಿಯಲ್ಲ. ಮಾರುಕಟ್ಟೆಯ ಬೆಲೆ ನಿಗದಿತ ಬೆಲೆಗಿಂತ ಕಡಿಮೆ ಇದ್ದರೆ ಮಾತ್ರ ಕಟ್ಟಿಗೆ ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ೩೧-೩-೧೯೬೬ಕ್ಕೆ ಮೊದಲು ಮೂರು ತಿಂಗಳಲ್ಲಿ ೯೧ ಜನಕ್ಕೆ ೯,೪೦,೧೧೬ ರೂಪಾಯಿಗಳ ಕಟ್ಟಿಗೆಯನ್ನು ನಿಗದಿತ ದರದಲ್ಲಿ ಕೊಟ್ಟಿದ್ದಾರೆ. ನಿಗದಿತ ದರ ಮಾರುಕಟ್ಟೆ ಬೆಲೆಗಿಂತ ಕಡಿಮೆ ಇದ್ದರೆ ಮಾತ್ರ ಕಟ್ಟಿಗೆಯನ್ನು ಕೊಳ್ಳುತ್ತಾರೆ. ಹೊನ್ನಾವರದಲ್ಲಿ ಈ ಸಮಯದಲ್ಲಿರುವ ಡಿ.ಎಫ್.ಓ ವೀಸ್ಪರ್ ಪ್ರಭು ಅವರಿಗೆ ಜನವರಿ ೧, ೧೯೬೬ನೇ ಇಸವಿಯಲ್ಲಿ ವರ್ಗಾವಣೆ ಆದೇಶ ಬಂತು. ಆದರೆ ನಮ್ಮ ಮಾಜಿ ಮಂತ್ರಿಗಳಾದ ಶ್ರೀ ದೇಶಪಾಂಡೆಯವರು ಶಿಫಾರಸ್ಸು ಮಾಡಿ ಅವರ ವರ್ಗಾವಣೆಯನ್ನು ಕ್ಯಾನ್‌ಸೆಲ್ ಮಾಡಿದರು.

ಅಧ್ಯಕ್ಷರು.—ತಾವು ನೇರವಾದ ಪ್ರಶ್ನೆ ಕೇಳಿ.

ಶ್ರೀ ಆರ್. ಎನ್. ನಾಯಕ್.—ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗಿದೆ. ನಾನು ನೇರವಾಗಿ ಪ್ರಶ್ನೆಯನ್ನು ಮುಂದಿಡಬಯಸುತ್ತೇನೆ, ಮಾನ್ಯ ದೇಶಪಾಂಡೆಯವರು ಏನು ಹೇಳಿದರು ಅಂದರೆ ಅವರು ಬಹಳ ಒಳ್ಳೆಯ ಅಧಿಕಾರಿ, ಅವರನ್ನು ಅಲ್ಲಿಯೇ ಮುಂದುವರಿಸಬೇಕಾಗಿದೆ ಎಂದು ಹೇಳಿದರು. ಒಳ್ಳೆಯ ಅಧಿಕಾರಿ ಆಗಿದ್ದರೆ, ನಿಗದಿತ ಬೆಲೆಯನ್ನು ಅನುಸರಿಸಿ ಕಟ್ಟಿಗೆಯನ್ನು ಕೊಡುತ್ತಿರುವುದಕ್ಕೆ ಬರುತ್ತಿರಲಿಲ್ಲ. ತಪ್ಪು ಮಾಡಿದಂತಹ ಈ ಕೆಟ್ಟ ಅಧಿಕಾರಿ, ಇವರ ಜಾತೀಗೇ ಸೇರಿದವರಾಗಿದ್ದುದರಿಂದ ಅವರನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ಅಧ್ಯಕ್ಷರು.—ನೀವು ಉಪಪ್ರಶ್ನೆ ಕೇಳುತ್ತೀರೋ ? ಭಾಷಣ ಮಾಡುತ್ತೀರೋ ? ನಿಮಗೆ ಬೇಕಾದರೆ ಅರ್ಧ ತಾಸು ಚರ್ಚೆಗೆ ನೋಟೀಸು ಕೊಡಿ, ಉಪ ಪ್ರಶ್ನೆ ಎಂದರೆ ತಮಗೆ ಗೊತ್ತಾಗುವುದಿಲ್ಲವೇ. ಎರಡು ವರ್ಷಗಳಿಂದ ತಾವು ಈ ಸಭೆಯಲ್ಲಿ ಇದ್ದೀರಿ. ನಿಮ್ಮ ಮನಸ್ಸಿನಲ್ಲಿ ಏನಿದೆ ಎನ್ನುವುದು ನನಗೆ ಗೊತ್ತಾಗಿದೆ.

ಶ್ರೀ ಆರ್. ಎನ್. ನಾಯಕ್.—ನನಗೆ ಗೊತ್ತಾಗುತ್ತದೆ, ಸಾಕಷ್ಟು ಲುಕ್ಸಾನು ಮಾಡಿರತಕ್ಕ ಈ ಕೆಟ್ಟ ಅಧಿಕಾರಿಯು ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನಂ ಇದೆ ಎನ್ನುವುದು ನನಗೆ ಅರ್ಥವಾಗುತ್ತಿದೆ, ಕೆಲವೊಂದು ತಪ್ಪು ನಡೆದಿದೆ, ಆ ಸಂಬಂಧಪಟ್ಟ ಅಧಿಕಾರಿಯಿಂದ ೬೪,೪೦೦ ರೂಪಾಯಿಗಳನ್ನು ವಸೂಲ್ಮಾಡಲಾಗಿದೆ. ಇನ್ನೂ ವಸೂಲು ಮಾಡಬೇಕಾದ ಹಣ ಇದೆ. ಪ್ರಭುರವರು ತಪ್ಪು ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ಎನ್. ನಾಯಕ್.—೬೪,೦೦೦ ರೂಪಾಯಿಗಳನ್ನು ನೀವು ಯಾರಿಂದ ವಸೂಲ್ಮಾಡಿದ್ದೀರಿ. ಪ್ರಭು ಅವರಿಂದ ವಸೂಲ್ಮಾಡಿದ್ದೀರೋ ಅಥವಾ ಕಟ್ಟಿಗೆ ತೆಗೆದುಕೊಂಡವರಿಂದ ವಸೂಲ್ಮಾಡಿದ್ದೀರೋ ?

ಶ್ರೀ ಜೆ. ಎಸ್. ದೇಶಮುಖ್.—ಈಗಾಗಲೇ ಹೇಳಿದಂತೆ ಪ್ರಭು ಅವರಿಂದ ವಸೂಲು ಮಾಡಲಾಗಿದೆ. ಪ್ರಭು ಅವರ ಮೇಲೆ ಕ್ರಮ ಕೈಗೊಳ್ಳಲು ಇಲಾಖೆ ಕಾರ್ಯಕ್ರಮ ರೂಪಿಸುತ್ತದೆ.

ಶ್ರೀ ಆರ್. ಎನ್. ನಾಯಕ್.—೬೪,೦೦೦ ರೂಪಾಯಿಗಳನ್ನು ವಸೂಲು ಮಾಡಬೇಕಾದರೆ ಅವರು ಕಾನೂನು ಪ್ರಕಾರ ಮಾಡಿದ್ದಾಗಿ ವರ್ತಿಸಿದ್ದಾರೆ ಎನ್ನುವುದು ಸರ್ಕಾರಕ್ಕೆ ಮನವರಿಕೆಯಾಗಿದ್ದರೂ ಈ ತನಕ ಅವರನ್ನು ಏತಕ್ಕೆ ಸಸ್ಪೆನ್ಷನ್‌ನಲ್ಲಿ ಇಟ್ಟಿಲ್ಲ ? ಅವರ ಮೇಲೆ ಯಾಕೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲ ?

ಶ್ರೀ ದೇಶಮುಖ್.—೬೪,೦೦೦ ರೂಪಾಯಿಗಳನ್ನು ಕಟ್ಟಿಗೆ ತೆಗೆದುಕೊಂಡಿರುವವರಿಂದ ವಸೂಲು ಮಾಡಲಾಗಿದೆ. ಪ್ರಭು ಅವರಿಂದ ವಸೂಲು ಮಾಡಿಲ್ಲ.

ಶ್ರೀ ಆರ್. ಎನ್. ನಾಯಕ್.—ಮೊದಲು ಪ್ರಭು ಅವರಿಂದ ವಸೂಲು ಮಾಡಿದೆವು ಎಂದು ಹೇಳಿದ್ದೀರಿ. ಈಗ ಕಟ್ಟಿಗೆಯವರಿಂದ ವಸೂಲು ಮಾಡುತ್ತೇವೆಂದು ಹೇಳಿದ್ದೀರಿ. ತಪ್ಪು ಮಾಡಿದ

ಅಧಿಕಾರಿಯನ್ನು ಏತಕ್ಕೆ ಇಸ್ಪೂ ಮುಂದುವರೆಸಿದ್ದೀರಿ ? ಸಸ್‌ಪೆನ್‌ಷನ್ ಏತಕ್ಕೆ ಮಾಡಿಲ್ಲ ? ಬೇರೆ ಕ್ರಮ ತೆಗೆದುಕೊಳ್ಳುವುದಕ್ಕೆ ಏತಕ್ಕೆ ಹಿಂದೇಟು ಹಾಕುತ್ತಿದ್ದೀರಿ? ದೇಶಪಾಂಡೆಯವರ ಸಂಬಂಧಿಕರು ಅಂತ ಹಿಂದೇಟು ಹಾಕುತ್ತಿದ್ದೀರಾ ?

ಶ್ರೀ ಜೆ. ಎಸ್. ದೇಶಮುಖ್.—ಅವರು ದೇಶಪಾಂಡೆಯವರ ಸಂಬಂಧಿ ಇರಬಹುದು ನನಗೆ ಸಂಬಂಧಿ ಅಲ್ಲ. ಅವರ ಮೇಲೆ ನಿಷ್ಪಕ್ಷಪಾತ ಕ್ರಮ ತೆಗೆದುಕೊಳ್ಳುತ್ತೇನೆ.

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ನಷ್ಟ ಅನುಭವಿಸುತ್ತಿರುವ ಬಗ್ಗೆ.

೨೭೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕೈಗಾರಿಕೆ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ಉಕ್ಕಿನ ಕಾರ್ಖಾನೆಗೆ ಸಂಕಷ್ಟ ವಿದ್ಯುತ್ ಸರಬರಾಜು ಆಗುತ್ತಿಲ್ಲವಾದ ಕಾರಣ ನಷ್ಟ ಅನುಭವಿಸುತ್ತಿರುವುದು ನಿಜವೇ ? ಬಾಗಿದ್ದಲ್ಲಿ ಅದನ್ನು ಸರಿಪಡಿಸಲು ಕೈಗೊಂಡ ಕ್ರಮವೇನು?

ಆ) ಈ ಕೈಗಾರಿಕೆಯನ್ನು ಉಳಿಸಿ ಬೆಳೆಸಲು ಸರ್ಕಾರದವರು ಏನು ಯೋಜನೆ ಮಾಡಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಹೌದು, ಮಳೆಯು ಚೆನ್ನಾಗಿ ಬರುತ್ತಿರುವ ಕಾರಣ ರಾಜ್ಯದ ವಿದ್ಯುಚ್ಛಕ್ತಿ ಪರಿಸ್ಥಿತಿಯು ಉತ್ತಮಗೊಳ್ಳುವ ಸಂಭವವಿದೆ ಮತ್ತು ತತ್ಫಲವಾಗಿ ವಿದ್ಯುತ್ ಉತ್ಪಾದನೆಗೆ ಅನುಗುಣವಾಗಿ ಅಗತ್ಯ ವಿರುವಷ್ಟು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ಪ್ರಯತ್ನಿಸಲಾಗುತ್ತಿದೆ.

ಆ) ಕೇಂದ್ರ ಸರ್ಕಾರದ ಸುದ್ದಿವೆಯಾದ ಭಾರತೀಯ ಉಕ್ಕು ಪ್ರಾಧಿಕಾರವು ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ತೆಗೆದುಕೊಳ್ಳುವಂತೆ ಮನವೊಲಿಸಲು ಪ್ರಯತ್ನಿಸಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ೮೩ ಕೋಟಿ ರೂಪಾಯಿ ಲುಕ್ಸಾನು ಆಗಿದೆಯೆಂದು ಇತ್ತೀಚೆಗೆ ಪತ್ರಿಕೆಯಲ್ಲಿ ಬಂದಿದೆ. ಅದು ನಿಜವೇ ? ಇತ್ತೀಚೆಗೆ ಮಳೆ ಚೆನ್ನಾಗಿ ಬಂದಿರುವುದರಿಂದ ವಿದ್ಯುಚ್ಛಕ್ತಿ ಸುಧಾರಣೆ ಆಗಿದೆ. ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೀರಿ. ಭದ್ರಾವತಿ ಉಕ್ಕಿನ ಕಾರ್ಖಾನೆ ವಿದ್ಯುಚ್ಛಕ್ತಿ ಕೊರತೆಯಿಂದ ನಷ್ಟ ಅನುಭವಿಸುತ್ತಿರುವ ಸಂದರ್ಭದಲ್ಲಿ ಈ ವರ್ಷಕ್ಕೆ ಅಗತ್ಯವಾದಂತಹ ವಿದ್ಯುತ್ತನ್ನು ಸರಬರಾಜು ಮಾಡಲು ಆಶ್ವಾಸನೆ ಕೊಡುತ್ತೀರಾ ? ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಕೇಂದ್ರ ಸರ್ಕಾರ ಪ್ರಾರಂಭ ಮಾಡಿದರೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿದ್ದೀರಿ. ಹೆಚ್ಚಿನ ಕಾರ್ಖಾನೆ ಆದ ಇದಕ್ಕೆ ವಿದ್ಯುತ್ತನ್ನು ಒಗಿಸುತ್ತೀರಾ? ಎಂದಿನಂತಾಗಿ, ಕೇಂದ್ರ ಸರ್ಕಾರದ ಭಾರತೀಯ ಉಕ್ಕು ಪ್ರಾಧಿಕಾರಕ್ಕೆ ವಿಶ್ವೇಶ್ವರಯ್ಯ ಕೈಗಾರಿಕೆಯನ್ನು ವಹಿಸಿಕೊಳ್ಳುವಂತೆ ಮನ ಒಲಿಸಲು ಪ್ರಯತ್ನ ಮಾಡಲಾಗಿದೆ ಎಂದು ಹೇಳಿದ್ದೀರಿ. ಸಂತೋಷ. ಅಲ್ಲಿಯವರೆಗೂ ಸಷ್ಟವಾಗುವುದನ್ನು ತಪ್ಪಿಸುವುದಕ್ಕೆ ಬಿಡದೆ ಅದಕ್ಕೆ ಬೇಕಾದ ವಿದ್ಯುಚ್ಛಕ್ತಿ, ಮತ್ತು ಕಚ್ಚಾ ವಸ್ತುಗಳನ್ನು ಒಗಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆ ಇವೊತ್ತು ರೋಗಗ್ರಸ್ತ ಆಗಿರುವುದು ಕೇವಲ ವಿದ್ಯುತ್ ಕೊರತೆಯಿಂದಲ್ಲ. ವಿದ್ಯುತ್ ಕೊಡದೆ ಬಹಳಷ್ಟು ಕೆಲಸ ನಿಂತಿದೆ. ಈ ಕಾರ್ಖಾನೆ ಬಹಳ ಹಿಂದೆ ಯೋಚನೆ ಮಾಡಿ ಕಟ್ಟಿದಂತಹ ಕಾರ್ಖಾನೆ. ಆಗ ಅಪ್ಲೈ ಮಾಡಿದಂತಹ ಟೆಕ್ನಾಲಜಿ ಬಹಳಷ್ಟು ವಿದ್ಯುತ್‌ನಿಂದ ಕೆಲಸ ನಿರ್ವಹಿಸುವಂಥಾದಾಗಿದ್ದವು. ಅದಕ್ಕೆ ಸಮನಾಗಿ ಇವೊತ್ತು ವಿದ್ಯುತ್ ಸರಬರಾಜು ಮಾಡುವುದಕ್ಕಾಗುತ್ತಿಲ್ಲ. ಈ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸಬೇಕಾದರೆ ಅಲ್ಲಿರತಕ್ಕ ಟೆಕ್ನಾಲಜಿಯನ್ನೇ ಬದಲಾವಣೆ ಮಾಡಬೇಕಾಗಿರುತ್ತದೆ, ಈಗ ಇರತಕ್ಕ ಟೆಕ್ನಾಲಜಿ ಪ್ರಕಾರ ಆ ಕೈಗಾರಿಕೆಗೆ ನೂರಾ ಇಪ್ಪತ್ತು ಮೆಗಾವಾಟ್ ಪವರ್ ಕೊಡಬೇಕಾಗುತ್ತದೆ, ಅಷ್ಟು ಪವರ್ ಕೊಡುವುದಕ್ಕೆ ಸಾಧ್ಯ ಇಲ್ಲ. ಅಲ್ಲಿರತಕ್ಕ ಯಂತ್ರಗಳನ್ನು ಆಧುನೀಕರಣ ಮಾಡತಕ್ಕ ಒಂದು ಕಾರ್ಯಕ್ರಮ ಇದೆ.